ರಾತ್ರಿ ಹನ್ನೆರಡುವರೆ ಗಂಟೆಯ ಸಮಯದಲ್ಲಿ ಪೂಲ್ಚಂದ್ರ ಬಾಪೂವಿನ ಮಲದ ಮಡಕೆಯೊಂದಿಗೆ ಹೊರಬಂದು ಆಶ್ರಮದ ದಕ್ಷಿಣ ಮೂಲೆಯಲ್ಲಿ ತೋಡಿದ್ದ ಹಳ್ಳದ ಕಡೆಗೆ ಹೋದಾಗ ಅವರನ್ನು ಕಂಡರು. ಆಶ್ರಮದ ಮುಂಬಾಗಿಲಲ್ಲಿ ನೆಟ್ಟಿದ್ದ ಬಿದಿರಿನ ಕೋಲಿನಲ್ಲಿ ತೂಗುತ್ತಿದ್ದ ಸೀಮೆ ಎಣ್ಣೆ ದೀಪದ ಬೆಳಕು ಅವರ ಹಿಂದೆ ಇದ್ದದ್ದರಿಂದ ನೆರಳಿನ ಆಕಾರವಾಗಿಯೇ ಅವರನ್ನು ನೋಡಲು ಸಾಧ್ಯವಾಯಿತು. ತೋಳಿನ ಮೇಲೆ ಹರಡಿದ್ದ ತಲೆ ಕೂದಲಿನಲ್ಲೂ ಗಡ್ಡದಲ್ಲೂ ದೀಪದ ಕೆಂಪಾದ ಬೆಳಕು ಹಬ್ಬಿ ಮಿಂಚುತ್ತಿತ್ತು.

''ಯಾರು?'' ಎಂದರು ಪೂಲ್ಚಂದ್ರ.

ಅವರು, ''ಶಿವೋಹಂ'' ಎಂದರು.

ಯಾರೋ ಭೈರಾಗಿ. ಅಪರೂಪಕ್ಕೆ ಹಾಗೆ ಕೆಲವರು ಬರುವುದುಂಟು. ಸಬರಮತಿಯ ಯಾವುದಾದರೂ ದೇವಸ್ಥಾನಗಳಿಗೆ ಬರುವವರು ಅಲ್ಲಿ ಯಾರ ಬಳಿಯಾದರೂ ತಂಗುವ ಜಾಗದ ಬಗ್ಗೆ ಕೇಳುವರು. ಹಳ್ಳಿಯ ಜನಗಳಿಗೆ ಈ ಆಶ್ರಮಕ್ಕೂ ಸನ್ಯಾಸಿಗಳ ಆಶ್ರಮಕ್ಕೂ ಇರುವ ವ್ಯತ್ಯಾಸ ಇನ್ನೂ ತಿಳಿದಿರಲಿಲ್ಲ. ಅವರು ಈ ಆಶ್ರಮದ ಕಡೆ ಕೈ ತೋರಿಸಿಬಿಡುತ್ತಾರೆ.

ಪೂಲ್ಚಂದ್ರ, ''ಇದು ಸನ್ಯಾಸಿಗಳ ಆಶ್ರಮವಲ್ಲ'' ಎಂದು ಹೇಳಿದರು. ಆ ಮುಂಚೆ ಬರುವವರೆಲ್ಲರನ್ನು ಉಳಿಸಿಕೊಳ್ಳುವ ರೂಢಿಯಿತ್ತು. ಆದರೆ ಹೆಚ್ಚಿನ ಭೈರಾಗಿಗಳೂ ಸನ್ಯಾಸಿಗಳೂ ಗಾಂಜಾ ಸೇದುವವರು. ಅದಕ್ಕಿಂತ ಹೆಚ್ಚಾಗಿ ಆಶ್ರಮದಲ್ಲಿ ಸನ್ಯಾಸಿಗಳಾದ ತಮಗೆ ವಿಶೇಷ ಗೌರವ ನೀಡಬೇಕೆಂದು ನಿರೀಕ್ಷಿಸುತ್ತಿದ್ದರು. ಬಾಪೂ ಆ ವಿಷಯದಲ್ಲಿ ಬಹಳ ಖಡಾಖಂಡಿತವಾದಿ. ಅವರಿಗೆ ಅಲೆಯುವ ಸನ್ಯಾಸಿಗಳ ಬಗ್ಗೆ ಗೌರವವಿರಲಿಲ್ಲ. ಅವರ ಜೀವನ ಮತ್ತು ಅಧ್ಯಾತ್ಮಗಳು ಅವರಿಗೆ ಅರ್ಥವಾಗಿರಲಿಲ್ಲ. ಒಬ್ಬ ಮನುಷ್ಯ ತನ್ನ ಪಂಚೇಂದ್ರಿಯಗಳನ್ನು ಅಡಗಿಸಿ, ಪರ ಲೋಕವನ್ನು ತಬ್ಬಿಕೊಂಡು ತನ್ನನ್ನು ದೂರ ಸರಿಸಿ ಬೇರ್ಪಡುವುದನ್ನು ಬಾಪೂ ಒಂದು ಪಾಪವೆಂದೇ ಭಾವಿಸಿದ್ದರು.

''ಗೊತ್ತು'' ಎಂದರು ಭೈರಾಗಿ. ''ನಾನು ಮಾನ್ಯ ಗಾಂಧಿಯನ್ನು ನೋಡಲು ಬಂದಿದ್ದೇನೆ'' ಎಂದು ಅವರು ಸರಳವಾಗಿ ಇಂಗ್ಲಿಷಿನಲ್ಲಿ ಮಾತನಾಡಿದ್ದು ಪೂಲ್ಚಂದ್ರರನ್ನು ಆಶ್ಚರ್ಯಗೊಳಿಸಿತು.

ಪೂಲ್ಚಂದ್ರರು, ''ಎಲ್ಲಿಂದ'' ಎಂದರು.

''ದೂರದಿಂದ'' ಎಂದಾಗ,

ಅದು ಬಂದವರ ಮಾರುವೇಷವೋ ಎಂಬ ಭಾವನೆಯನ್ನು ಉಂಟುಮಾಡಿತು. ತಲೆಮರೆಸಿಕೊಂಡು ಕಾರ್ಯನಿರತರಾಗಿರುವ ಭಯೋತ್ಪಾದಕ ಗುಂಪಿಗೆ ಸೇರಿದವರು ಯಾವಾಗಲೂ ಆಯ್ಕೆಮಾಡುವ ವೇಷ ಭೈರಾಗಿಯದ್ದೇ ಆಗಿರುತ್ತದೆ. ಭಾರತದಲ್ಲಿ ಭೈರಾಗಿಗಳ ಬಳಿ ಯಾವ ಪ್ರಶ್ನೆಯನ್ನೂ ಕೇಳಲು ಸಾಧ್ಯವಿಲ್ಲ, ಯಾರ ಬಳಿಯೂ ಯಾವ ಆಧಾರವೂ ಇರುವುದಿಲ್ಲ. ಸನ್ಯಾಸಿಗಳ ಬಳಿ ಪೊಲೀಸರು ಹದ್ದುಮೀರಿದರೆ ಸಾರ್ವಜನಿಕರು ನೆರವಿಗೆ ಬರುತ್ತಾರೆ. ಒಂದು ತಿಂಗಳ ಮುಂಚೆ ಭೈರಾಗಿಯ ವೇಷ ಧರಿಸಿದ ಒಬ್ಬ ಬಂದು ಬಾಪುವಿನ ಜತೆ ಅತಿ ಉಗ್ರವಾಗಿ ವಾದಮಾಡಿ ಹೋಗಿದ್ದ.

"ಅವರಿಗೆ ಮೈ ಸರಿಯಿಲ್ಲ'' ಎಂದರು ಪೂಲ್ಚಂದ್ರ.

''ಗೊತ್ತು. ನಾನು ಅದಕ್ಕಾಗಿಯೇ ಅವರನ್ನು ಭೇಟಿಯಾಗಲು ಬಂದಿರುವೆ.''

ಪೂಲ್ಚಂದ್ರ ನಿಟ್ಟುಸಿರುಬಿಟ್ಟರು. ಸರಿಹೋಯ್ತು, ಇವರು ಮತ್ತೊಬ್ಬ ವೈದ್ಯ. ಕಳೆದ ಹನ್ನೆರಡು ದಿನಗಳಿಂದ ಬಾಪು ಅನಾರೋಗ್ಯದಿಂದಿದ್ದು, ಸುತ್ತಮುತ್ತಲಿನ ನಾಟಿ ವೈದ್ಯರೂ